### ಆಳ್ವಾಸ್ ಎಜ್ಯುಕೇಶನ್ ಫೌಂಡೇಶನ್‌ನಲ್ಲಿ ಪದವಿ ಪ್ರದಾನ

# ವೈಯಕ್ತಿಕ ಉತ್ಕರ್ಷೆಯೊಂದಿಗೆ ರಾಷ್ಟ್ರಹಿತ ಚಿಂತನೆಯೂ ಇರಲಿ: ಕಾಗೇರಿ

ಮೂಡಬಿದಿರೆ, ಮೇ 13: ಯುವಜನರು ಸಮರ್ಪಕಶಿಕ್ಷಣದಮೂಲಕವೈಯಕ್ತಿಕಉತ್ಕರ್ಷೆ ಸಾಧಿಸುವ ಜತೆಗೆ ರಾಷ್ಟ್ರ ಹಿತ ಚಿಂತನೆಯನ್ನೂ ಮೈಗೂಡಿಸಿಕೊಂಡು ಜವಾಬ್ದಾರಿಯುತ ನಾಗರಿಕರಾಗಿ ಮುನ್ನಡೆ ಸಾಧಿಸಬೇಕು ಎಂದು ರಾಜ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿ ನುಡಿದರು.

ರವಿವಾರ ಸಂಜೆ ವಿದ್ಯಾಗಿರಿಯ ಸುಂದರಿ ಆನಂದ ಆಳ್ವ ಆವರಣದಲ್ಲಿ ಕೆ.ವಿ. ಸುಬ್ಬಣ್ಣ ಬಯಲು ರಂಗ ಮಂದಿರದಲ್ಲಿ ನಡೆದ ಆಳ್ವಾಸ್ ಎಜ್ಯುಕೇಶನ್ ಫೌಂಡೇಶನ್‌ನ 9ನೇ ಪದವಿ ಪ್ರದಾನ ಸಮಾರಂಭದ ಅಧ್ಯಕ್ಷತೆ ವಹಿಸಿ, ಪದವಿ ಪ್ರದಾನಗೈದು ಮಾತನಾಡಿದ ಅವರು, ಮೌಲ್ಯಗಳ ಅಧಃಪತನವಾಗುತ್ತಿದೆ ಎಂಬ ಕಳವಳಕಾರಿ ಸನ್ನಿವೇಶವನ್ನು ನಿವಾರಿಸಿ ಪರಿವರ್ತನೆ ಸಾಧಿಸಿ ತೋರಲು ಯುವಜನರು ಕಟಿಬದ್ಧರಾಗಬೇಕು ಎಂದು ಕರೆನೀಡಿದರು.

ಮುಖ್ಯ ಅತಿಥಿಗಳಾಗಿ ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿ.ವಿ.ಯ ಮಾಜಿ ವೈಸ್ ಛಾನ್ಸಲರ್ ಡಾ. ಎಸ್. ರಮಾನಂದ ಶೆಟ್ಟಿ ವಿಧಾನ ಪರಿಷತ್ ಸದಸ್ಯ ಕ್ಯಾ. ಗಣೇಶ್ ಕಾರ್ಣಿಕ್, ಮಾಜಿ ಸಚಿವ ಕೆ. ಅಮರನಾಥ ಶೆಟ್ಟಿ ಅವರು ಭಾಗವಹಿಸಿದ್ದರು. ಟ್ರಸ್ಟಿಗಳಾದ ಮಿಜಾರುಗುತ್ತು ಆನಂದ ಆಳ್ವ ವಿವೇಕ ಆಳ್ವ ರವೀಂದ್ರ ಶೆಟ್ಟಿ ಜಯಶ್ರೀ ಅಮರನಾಥ ಶೆಟ್ಟಿ ಹಾಗೂ ವಿವಿಧ ಕಾಲೇಜುಗಳ ಪ್ರಾಚಾರ್ಯರು ಉಪಸ್ಥಿತರಿದ್ದರು.

'ಪದವಿ ಮಾತ್ರ ಪರಮ ಅಲ್ಲ, ಅದೊಂದು ವಿದ್ಯಾರ್ಹತೆ ಮಾತ್ರ, ಸಮಾಜದಲ್ಲಿ ನೀವು ಸಂಸ್ಕಾರವಂತರಾಗಿ ಹೇಗೆ ಹೊಂದಿ ಬಾಳುತ್ತೀರಿ ಎಂಬುದೇ ಮುಖ್ಯ ಎಂದ ಡಾ। ರಮಾನಂದ ಶೆಟ್ಟಿ ಅವರು, ಆಳ್ವಾಸ್ ಶಿಕ್ಷಣದೊಂದಿಗೆ ಕಲೆ, ಸಂಸ್ಕೃತಿ, ಕ್ರೀಡೆ ಮೊದಲಾದ ರಂಗಗಳ ಮೂಲಕ ವಿದ್ಯಾರ್ಥಿಗಳನ್ನು ಸುಶೀಲರನ್ನಾಗಿ ರೂಪಿಸುವ ಅಪೂರ್ವ ತಾಣ ಎಂದು ಶ್ಲಾಘಿಸಿದರು.



ಸ್ವಿಟ್ಜರ್‌ಲೆಂಡ್‌ನ ಕೆರೋಲ್ ಝಿನ್ಸೆಲ್ ಅವರನ್ನು ಸಮ್ಮಾನಿಸಲಾಯಿತು.

ಬೆಂಗಳೂರು ರಾ.ಗಾ.ವಿ.ವಿ., ಬೆಳಗಾವಿಯ ವಿ.ಟಿ.ಯು. ಹಾಗೂ ಮಂಗಳೂರು ವಿ.ವಿ. ಇವುಗಳಿಗೆ ಸಂಯೋಜಿತವಾಗಿರುವ ಆಳ್ವಾಸ್‌ನ ಆಯುರ್ವೇದ, ನ್ಯಾಚುರೋಪತಿ, ನರ್ಸಿಂಗ್, ಫಿಸಿಯೋಥೆರಪಿ, ಹೋಮಿಯೋಪತಿ, ಎಂಎಲ್‌ಟಿ, ಹೋಸ್ಪಿಟಲ್ ಅಡ್ಮಿನಿಸ್ಟ್ರೇಶನ್, ಎಂಬಿಎ, ವಿವಿಧ ಪದವಿ/ಸ್ನಾತಕೋತ್ತರ ಪದವಿ, ಬಿಎಡ್, ಎಂಪಿಎಡ್ ಕಾಲೇಜು ಇವುಗಳ ಸುಮಾರು 1,000 ಪದವೀಧರರಿಗೆ ಪದವಿ ಪ್ರದಾನ ಮಾಡಲಾಯಿತು.

ಸಂಸ್ಥೆಯ ಅಧ್ಯಕ್ಷ ಡಾ। ಎಂ. ಮೋಹನ ಆಳ್ವ ಅವರು ಸ್ವಾಗತಿಸಿದರು. ಆಂಗ್ಲ ಭಾಷಾ ಉಪನ್ಯಾಸಕಿ ದೀಪಾ ಕೊಟ್ಟಾರಿ ಕಾರ್ಯಕ್ರಮ ನಿರೂಪಿಸಿದರು. ನರ್ಸಿಂಗ್ ಕಾಲೇಜಿನ ಪ್ರಾಚಾರ್ಯ ಪ್ರೊ। ಬಿ.ಎ. ಯತಿಕುಮಾರ ಸ್ವಾಮಿ ಗೌಡ ವಂದಿಸಿದರು.

### ಪೇಪರ್ ಬಾಲಕ ಉಪನ್ಯಾಸಕ

'ಒಂದು ಕಾಲದಲ್ಲಿ ಆಳ್ವಾಸ್‌ಗೆ ಪೇಪರ್ ಹಾಕುತ್ತಿದ್ದ ಬಾಲಕ ನಾನು. ಇಲ್ಲೇ ಬಿಎಸ್ಸಿ ನರ್ಸಿಂಗ್ ಪದವಿ ಪಡೆದ ನನಗೆ ಡಾ। ಆಳ್ವರು ಉಚಿತವಾಗಿ ಎಂಎಸ್ಸಿ ಸೀಟು ಕೊಟ್ಟರು. ಇಲ್ಲೇ ಉಪನ್ಯಾಸಕ ಹುದ್ದೆ ನೀಡಿದರು. ಶಿಸ್ತು ಸಹಿತ ಸಂಪೂರ್ಣ ವ್ಯಕ್ತಿತ್ವ ವಿಕಸನಕ್ಕೆ, ಎನ್ಎಸ್ಎಸ್ ಮತ್ತಿತರ ಚಟುವಟಿಕೆಗಳ ಮೂಲಕ ರಾಷ್ಟ್ರ ಮಟ್ಟದ ಪ್ರಶಸ್ತಿಗಳನ್ನು ನಾನು ಪಡೆಯಲು ಸಾಧ್ಯವಾಯಿತು ಎಂದು ಭಾವೋತ್ಕಂಠಿತರಾಗಿ ಸ್ಮರಿಸಿಕೊಂಡವರು ಆಳ್ವಾಸ್ ಕಾಲೇಜ್ ಆಫ್ ನರ್ಸಿಂಗ್‌ನಲ್ಲಿ ಎಂಎಸ್ಸಿ ನರ್ಸಿಂಗ್ ಪದವಿ ಪಡೆದ ಮೂಡಬಿದಿರೆಯ ಧೀರೇಂದ್ರ ಜೈನ್.

### ಆಯುರ್ವೇದ ವೈದ್ಯಳಾದ ಸ್ವಿಸ್ ಕುವರಿ

ವಿದೇಶಿ ವಿದ್ಯಾರ್ಥಿನಿಯಾಗಿ ಈ ದೇಶದಲ್ಲೇ ಆಯುರ್ವೇದದಲ್ಲಿ ಪದವಿ ಪಡೆದ ಮೊದಲಿಗರೆಂಬ ಹೆಗ್ಗಳಿಕೆಗೆ ಪಾತ್ರರಾದ, ಆಳ್ವಾಸ್ ಆಯುರ್ವೇದ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿ, ಸ್ವಿಟ್ಜರ್‌ಲೆಂಡ್‌ನ ಕೆರೋಲ್ ಝಿನ್ಸೆಲ್ ಅವರು ತಂಪಿನ ಸ್ವಿಸ್‌ನಿಂದ ಬಂದು ಉಷ್ಣವಲಯದ ಭಾರತದಲ್ಲಿ ನಿಂತು ಎಲ್ಲ ಪರೀಕ್ಷೆಗಳಲ್ಲೂ ಉತ್ತೀರ್ಣಳಾಗಿದ್ದೇನೆ. ಇಲ್ಲಿನ ಆಹಾರ ಪದ್ಧತಿಗೆ ಒಗ್ಗಿಕೊಂಡೆ. ಸಂಸ್ಕೃತವನ್ನು ಕಲಿತೆ, ಕನ್ನಡ, ಹಿಂದಿ, ಮಲಯಾಳಂ, ಗುಜರಾತಿಯೇ ಮೊದಲಾದ ಭಾಷಾ ಮೂಲದ ಸಹಪಾಠಿಗಳ ಸಾಂಗತ್ಯವೂ ಲಭಿಸಿದೆ. ಪ್ರಪಂಚದ ಯಾವುದೇ ಮೂಲೆಯಲ್ಲಿ ಯಶಸ್ವಿಯಾಗಿ ಜೀವಿಸುವ ಶಕ್ತಿಯನ್ನು ಆಳ್ವಾಸ್ ಕ್ಯಾಂಪಸ್ ನನಗೊದಗಿಸಿದೆ' ಎಂದು ನುಡಿದು ಇಲ್ಲಿ ಅಧ್ಯಯನ ಮಾಡಲು ಅವಕಾಶ ಕಲ್ಪಿಸಿದ ಡಾ। ಮೋಹನ ಆಳ್ವರಿಗೆ ಹೃತ್ಪೂರ್ವಕ ಅಭಿವಂದನೆ ಸಲ್ಲಿಸಿದರು. ಸಮಾರಂಭದಲ್ಲಿ ಕೆರೋಲ್ ಅವರ ಮಾತಾಪಿತರೂ ಪಾಲ್ಗೊಂಡಿದ್ದರು. ಕೆರೋಲ್‌ಗೆ ಆಯುರ್ವೇದದಲ್ಲಿ ಉನ್ನತ ಶಿಕ್ಷಣಕ್ಕೂ ಅವಕಾಶ ಕಲ್ಪಿಸುವುದಾಗಿ ಡಾ। ಆಳ್ವರು ಪ್ರಕಟಿಸಿದರು.



# ಶಿಕ್ಷಣ ಉದ್ಯೋಗಕ್ಕೆ ಸೀಮಿತವಾಗದಿರಲಿ



■ ವಿಕ ಸುದ್ದಿಲೋಕ ಮೂಡುಬಿದರೆ

ಶಿಕ್ಷಣ ಕೇವಲ ಉದ್ಯೋಗಕ್ಕೆ ಸೀಮಿತಗೊಳ್ಳಬಾರದು. ಹಣದ ಬೆನ್ನು ಹತ್ತಿ ಉದ್ಯೋಗ ಬದಲಾಯಿಸುತ್ತಾ ಹೋಗದೆ ತನ್ನಲ್ಲಿರುವ ಆಸಕ್ತಿ ಪ್ರತಿಭೆಯನ್ನು ಬಳಸಿ ಹೆಚ್ಚಿನ ಸಾಧನೆ ಮಾಡಬೇಕು. ಆ ಮೂಲಕ ಜೀವನವನ್ನು ಸಾರ್ಥಕಗೊಳಿಸಬೇಕು ಎಂದು ರಾಜ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ಅವರು ಭಾನುವಾರ ರಾತ್ರಿ ಮೂಡುಬಿದರೆಯ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವತಿಯಿಂದ 11 ಕಾಲೇಜುಗಳ ಸುಮಾರು 800 ವಿದ್ಯಾರ್ಥಿಗಳಿಗೆ ಪದವಿ ಪ್ರದಾನಮಾಡಿ ಮಾತನಾಡಿದರು.

ಉದ್ಯೋಗ ಕ್ಷೇತ್ರದಲ್ಲಿ ಆದರ್ಶ ಮೌಲ್ಯಗಳನ್ನು ಪುನರ್ ಸ್ಥಾಪಿಸಬೇಕು. ವೈಯಕ್ತಿಕ ಜೀವನದ ಪ್ರಗತಿಯೊಂದಿಗೆ ಸಾಮಾಜಿಕ ಪ್ರಗತಿಗೂ ಕೊಡುಗೆ ನೀಡಬೇಕು ಎಂದ ಅವರು, ಉತ್ತಮ ಶಿಕ್ಷಣ ಪಡೆದು ಹೊರೆಯಾಗಿ ಬದುಕಬೇಡಿ, ಸ್ವಾವಲಂಬಿಗಳಾಗಿ ಬದುಕಿ. ಶಿಕ್ಷಣ ನೀಡಿ ತಮ್ಮ ಏಳಿಗೆಗೆ ಕಾರಣರಾದ ಹಿರಿಯರನ್ನು ಕಡೆಗಣಿಸಬೇಡಿ ಎಂದರು.

ವಿಧಾನ ಪರಿಷತ್ ಸದಸ್ಯ ಕ್ಯಾ. ಗಣೇಶ್ ಕಾರ್ಣಿಕ್, ಮಾಜಿ ಸಚಿವ ಕೆ. ಅಮರನಾಥ ಶೆಟ್ಟಿ, ರಾಜೀವ್ ಗಾಂಧಿ ಆರೋಗ್ಯ ವಿ.ವಿ. ಮಾಜಿ ಉಪಕುಲಪತಿ ಡಾ. ಎಸ್. ರಮಾನಂದ ಶೆಟ್ಟಿ, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ ಟ್ರಸ್ಟಿಗಳಾದ ವಿವೇಕ್ ಆಳ್ವ, ಜಯಶ್ರೀ ಎ. ಶೆಟ್ಟಿ, ರವೀಂದ್ರ ಶೆಟ್ಟಿ ಉಪಸ್ಥಿತರಿದ್ದರು. ಉಪನ್ಯಾಸಕಿ ಗೀತಾ ಕೊಠಾರಿ ನಿರೂಪಿಸಿದರು.